Regd No B G 155 Sn 9—3—1963

ಸತ್ಯವಾದಿ

48th Year
Satyavadi
DAILY
MYSORE 4

ಸಂಸ್ಥಾಪಕರು — ಅರಮನೆ ಸಿಂಹೇದಾರ್ ಎಂ ಏ ಸುಬ್ಬರಾಯರು ಸಂಪಾದಕರು — ಧರ್ಮಪ್ರಚಾರಸಿಂಹ ಎಂ ಎಸ್ ಕೃಷ್ಣಶಾಸ್ತ್ರಿ ೭ ಪೈ

ಮರಣದಂಡಪ

ಜಮ್ಮು — ರಾಜಕೀಯದ ಹೆಸರಿನಲ್ಲಿ ಕಾಶ್ಮೀರದಲ್ಲಿನ ಸ್ಕೂಲಿಗೆ ಹೋಗುವ ಹುಡುಗರನ್ನೂ ಕೊಲ್ಲಲು ಗಿನಿತಾಕಶಕಾರ ಶಂಡವನ್ನು ಪಾಕಿಸ್ತಾನ ತಯಾರಿಸುತ್ತಿದೆಯೆಂದು ಕಾಶ್ಮೀರ ಸಂಸತ್ ಸಭೆಯಲ್ಲಿ ತಿಳಿಸಲಾಯಿತು — ಈ ನಾಶಕಾರಿ ಕಾರ್ಯಕ್ಕೆ ಮರಣದಂಡನೆ ವಿಧಿಸುವ ಕಾಸನ ತರಲು ಕಾಶ್ಮೀರ ಸರಕಾರ ನಿರ್ಧರಿಸಿದೆ

ಉತ್ತರ

ಅಹಮದಾಬಾದು — ಪ್ರಧಾನಿ ಶಾಸ್ತ್ರಿಗಳು ವಿದ್ಯುಚ್ಛಕ್ತಿ ಸೇಗಲಿಂದ ಸ್ವಲ್ಪ ಉತ್ತರ : ಜನರು ಹರ್ಷಧ್ವನಿ ಮಾಡಿದರು.

ಹೊಂಗೆ ಪಾಕಲ್ಪಟ್ಟರು

ಮಧ್ಯಪ್ರದೇಶದ ಶಾಸನಸಭೆಯಿಂದ ಮೂರ್ಖಲ ಸಾಹಾಮುದೊಡನೆ ಸ್ವೀಕಾರ ಆಜ್ಞೆ ಉಲ್ಲಂಘಿಸುತ್ತಿದ್ದ ಸ್ವತಂತ್ರಸದಸ್ಯ ಅತ್ಮಾರಾಮ್ ಇರಗೇಲಿಯಾರನ್ನು ಅಜೆಗೆ ಸಾಗಿಸಲಾಯಿತು.

ಒಳ್ಳೇ ಸಲಹೆ

ಬೆಂಗಳೂರು — ಅಧಿಕೃತ ಭಾಷೆ ಹಿಂದಿ ಒಗ್ಗೆ ಸ್ಪಂಕಾಂಪು ತನ್ನ ಅಭಿವ್ಯಾಪ್ತಿಯನ್ನು ಕೇಂದಕ್ಕೆ ತಿಳಿಸುವ ಮುನ್ನ ಶಾಸನಸಭೆಗಳ ಮತ್ತು ಜನತಾ ಅಭಿಪ್ರಾಯವನ್ನು ತಿಳಿದುಕೊಳ್ಳಬೇಕೆಂದು ಪಡಾವ ಪರಿಷತ್ತಿನಲ್ಲಿ ಶ್ರೀ ಮಲಂಕಾಧ್ಯ ರು ಹೇಳಿದರು.

ನಾಳೆಯ ಪಂಚಾಂಗ

ಆಷಾಢ ಸುಮಹತವಿದ್ವಾ ಧರ್ಮಾಧಿಕಾರಿ
ದೈವಜ್ಞ ಶಿರೋಮಣಿ
ಶಾಲಕಶಾಸ್ತ್ರಾಸಕ್ತ ಜ್ಯೋತಿರ್ವಿದ್ವನ್ಮಣಿ
ಪಂಪಕೃಷ್ಣಜೋಯಿಸರವರಿಂದ
10 ಬುಧವಾರ ಸಪ್ತಮಿ ರೋಹಿಣಿ

ಎ ಜಿ ಓ

ಸಮ್ಮ ಕೇಳಿಕೆ ಬಗ್ಗೆ ಸರಕಾರದ ಮೇಲೆ ಒತ್ತಾಯಪೂರಾಡಲು ಸರಕಾರದ ಎ ಜಿ ಓ ನೌಕರರು ತಾ|| 16 ರಿಂದ ನೇರ ಕಾರ್ಯಾಚರಣೆ ಹೂಡಲಿರುವರೆಂದು ಸಂಘದ ಅಧ್ಯಕ್ಷಿಣಿ ಎಸ್ ದೇವಾಸಿಯಾ ಹೇಳಿದರು

★

ಗೋವಾ ಸೇರ್ಪಡೆ

ಬೊಂಬಾಯಿ — ಗೋವಾವನ್ನು ಮಹಾರಾಷ್ಟ್ರಕ್ಕೆ ಸೇರ್ಪಡೆ ಮಾಡುವ ಬಗ್ಗೆ ಭಾರತ ಸರ್ಕಾರವನ್ನು — ಒತ್ತಾಯ ಮಾಡುವ ನಿರ್ಣಯವನ್ನು ಶಾಸನ ಸಭೆಯಲ್ಲಿ ಮುಖ್ಯ ಮಂತ್ರಿ ಶ್ರೀ ನಾಯಕ್ ತಂದಿದ್ದಾರೆ

ಸ್ವತಃ ಪುಡಿ

ಕಲ್ಕತ್ತಾ — ಜನರು ಎಳ ವಿಶ್ವ ಸಮಾಜದ ಸದಸ್ಯರಾಗಿ ಜೀವಿಸಬೇಕು ಎಂದು ರಾಷ್ಟ್ರಾಧ್ಯಕ್ಷರು ಶನಿವಾರ ಹೇಳಿದರು

★

ಸರಿಯಾದ ಮಾತು

ನವದೆಹಲಿ — ಎಕ್ ಐ ಸಿ ಸಿ ಕಾರರಲ್ಲಿ ಮೈತ್ರೀ ಭಾವ ನೆಲೆಸಿರುವುದಕ್ಕಿಂತ ಬೇರೆ ಹೆಚ್ಚಿನ ಸಂತೋಷ ಕಮಗಿಲ್ಲವೆಂದು ಅರ್ಥ ಮಂತ್ರಿ ಶ್ರೀ ಕೃಷ್ಣಮಾಚಾರಿಯವರು ರಾಜ್ಯ ಸಭೆಯಲ್ಲಿ ಹೇಳಿದರು

●

ಹಿಂದಿ

ಅಲಹಾಬಾದು — ನಾಲ್ಕು ದಿನಗಳಿಂದ ನಡೆದ ಅಖಿಲ ಭಾರತ ಹಿಂದೀ ಸಮ್ಮೇಳನವು ರಾಷ್ಟ್ರೀಯ ಭಾಷೆಯು ಸಂಬಂಧದ ಯಾವ ರೀತಿಯ ರಾಜಕೀಯಕ್ಕೂ ಒಡಕ ಆವಕಾಶ ಕೂಡದೆಂದು ನಿರ್ಧರಿಸಿತು.

ಟೀ

ಪಿಡ್ನಿ — ಆಸ್ಟ್ರೇಲಿಯವು 1964 ರಲ್ಲಿ 62000000 ಪೌಂಡು ಟೀಯನ್ನು ಆಮದುಮಾಡಿಕೊಂಡಿತು.

ಶಾಸನಸಭೆಯಲ್ಲಿ

ಗೋಪಾಲಗೌಡರ ಸಸ್ಪೆಂಡ್

ಬೆಂಗಳೂರು — ಸರಕಾರಿ ನಾಮನಿರ್ದೇಶನವನ್ನು ಸಭೆಗೆ ಎಳೆದು ತಂದ ಎಸ್ಸೆಸ್ಪಿ ಸದಸ್ಯ ಗೋಪಾಲಗೌಡರನ್ನು ಸಭೆಗೆ ಅಗೌರವ ಮಾಡಿದ ಆರೋಪನೆಗಾಗಿ ಈ ಸಾರಿ ಶಾಸನಸಭೆಯು ಮುಗಿಯುವವರೆಗೆ ನಿನ್ನೆ ಸಸ್ಪೆಂಡು ಮಾಡಲಾಯಿತು.

೦೦೦

ಎ ಜಿ ಓ ಗಳಿಗೆ ಬಗ್ಗೆ ಬೇಟಲ

ಬೆಂಗಳೂರು — ಎ ಜಿ ಓ ಗಳಿಗೆ ಹೆಚ್ಚು ಸಂಭಾವನೆ ದೊರೆಯುವೇಕೆಂಬ ವಿಷಯದಲ್ಲಿ ನಿನ್ನೆ ಶಾಸನ ಸಭೆಯು ಬಿಡ್ಡೆಟಿ ಚರ್ಚೆಯಲ್ಲಿ ತೊಡಗಿ ಬೇಟಲ ದೊರೆಯಿತು.

ಶ್ರೀ ಪ್ರಕಾಶರ ಸಿಡಿಮಿಡಿ

ಶಾಮನ ಆಗಮನದಂದಿನಿಂದ ಉತ್ತರ ಮತ್ತು ದಕ್ಷಿಣದವರಲ್ಲಿ ಮೂಲತಃ ಸಾಂಸ್ಕೃತಿಕ ವ್ಯತ್ಯಾಸ ಹಾಗೂ ಭೇದ ಕಾಣುಬಂದಿರುತ್ತದೆ ; ದಕ್ಷಿಣದ ಪಂಡಿತರು ಆರ್ಯದೇಶಗಳಿಂದ ಬಂದವರೆಂದು ಪಾಂಗಣಪಡಿಸಿದ್ದರೆಂದು ವಿದ್ಯಾಸನ ಮಾಡಿರುವ ರಾಜ್ಯಪಾಲ ಶ್ರೀ ಶ್ರೀ ಪ್ರಕಾಶರು ಈ ಮಾತುಗಳನ್ನು ವಿಶ್ವೇಶ್ವರಯ್ಯ ಇಂಟರ್ ನ್ಯಾಷನಲ್ ಕಾಲೇಜಿನ ಶತಮಾನೋತ್ಸವ ಸಭೆಯಲ್ಲಿ ಆಡಿರುತ್ತಾರೆಂದು : ಅವರು ಮಹಾಭಾರತ ದುಃಶಂತನಿಗೆ ಮೂಲವಲ್ಲಿ ಎಂಬುದಾಗಿ ಕಾಣಿಸಿ ಭಾಷಣವನ್ನಾಡುತ್ತಿದ್ದಾಗ ಆ ಶಬ್ದಗಳನ್ನಾಡಿರುವರು. ಶ್ರೀ ಪ್ರಕಾಶರು ತಂದೆಯವರು ಉತ್ತರ ಕರ್ನಾಟಕ್ಕೆ ನಿಗಳಿದ್ದು, ಭಾರತ ಸರಕಾರದಿಂದಲೂ ಗೌರವಿಸಲ್ಪಟ್ಟವರಾಗಿದ್ದಾರೆ : ಶ್ರೀ ಪ್ರಕಾಶರು ಸ್ವಾತಂತ್ರ್ಯ ಸಮರದಲ್ಲಿ ಭಾಗವಹಿಸಿದ್ದಂಗಿದೆ, ನಂತರ ರಾಜ್ಯಪಾಲರಂತಹ ಜವಾಬ್ದಾರಿ ಪದವಿಯಲ್ಲೂ ಇದ್ದರು ; ಅವೆಲ್ಲವನ್ನೂ ಬಿಟ್ಟು ಕಳೆದ ನಿರಾಶ ಈ ಸಮಯದಲ್ಲಿ ಅವರು ಪತ್ರಿಕೆಗಳಿಗೆ ಲೇಖನಗಳನ್ನು ಬರೆಯುತ್ತಿದ್ದಾರೆ ; ಈಗಿನ ವಿದ್ಯಾಭ್ಯಾಸದ ಸಮಸ್ಯೆಗಳ ಕುರಿತು ಬರೆಯುವಾಗ ಅವರು ಪ್ರಾದೇಶಿಕ ಭಾಷೆಗಳಿಗೆ ಪ್ರಾಮುಖ್ಯತೆ ಸಿಗಬೇಕೆಂದು ಬರೆದಿದ್ದರು.....

ಹೀಗೆಲ್ಲ ಇದ್ದರೂ ದಿಢೀರನೆ ಅವರಿಗೇನಾಯ್ತು ? ಭಾಷಾ ಬಡಿದಾಟದ ನಡುವೆ ಅವರೇಕಕ್ಕಾಗಿ ಶ್ರೀ ರಾಮಚಂದ್ರನನ್ನು ತಂದುಬಿಟ್ಟರು ? ಅಷ್ಟೇ ಅಲ್ಲ, ಅವರಿಗೆ ಇದೀಗ ವಿಂಧ್ಯಪರ್ವತದ ಉತ್ತರಕ್ಕೆ ಮತ್ತು ದಕ್ಷಿಣಕ್ಕೆ ಇರುವ ನಡುವೆ ವ್ಯತ್ಯಾಸ ಇದೆಯೆಂಬ ಯೋಚನೆಯೂ ಒಂದಾಗಿರುತ್ತದೆ !

ಮದರಾಸಿನಲ್ಲಿ ಅವರು ರಾಜ್ಯಪಾಲರಾಗಿದ್ದಾಗ ಅದು ಗೊತ್ತಾಗಲಿಲ್ಲವೇನು ? ನಿಜವಾಗಿ ಶ್ರೀ ರಾಮಚಂದ್ರನನ್ನು ದಕ್ಷಿಣದವರು ಅಕ್ಕರೆಯಿಂದ ನೋಡಿ ಭಾವಿಸುತ್ತಿದ್ದಾರೆಂದು ? ಆ ರೀತಿ ಹೇಳುವ ಒಂದು ಗುಂಪು ತಮಿಳುನಾಡಿನಲ್ಲಿ ಮಾತ್ರವಿದೆ : ಜೀರಾನ್ನಾಂಶ ಆ ರೀತಿ ಹೇಳುತ್ತಿಲ್ಲವಿದಲ್ಲ : ಅಲ್ಲಲ್ಲಿ ಶ್ರೀ ರಾಮ ರಾಮ ಆಂಜನೇಯ ದೇವಸ್ಥಾನಗಳಿವೆ : ಸಾಧಾರಣವಾಗಿ ಎಲ್ಲಾ ಬಾಲಕರಿಗೂ ರಾಮಾಯಣ ಗೊತ್ತಿದೆ : ತಮಿಳುನಾಡಿನ ಒಂದು ಗುಂಪು ಮಾತ್ರ ಶ್ರೀ ರಾಮ ಹಂದ್ರನ ಅನಹೇಳನೆ ಮಾಡುತ್ತಿದೆ ; ಅದರ ನೈತಿಕ ನಾಯಕರು ಒಂದು ನಾಟಕ ಪುಸ್ತಕವನ್ನು ಬರೆದಿದ್ದಾರೆ ; ಅದಂ ಮೇಲೆ ತಡೆಯಾಜ್ಞೆ ಇದೆ.

ಶ್ರೀ ಪ್ರಕಾಶ್ ಮುಂದರಿದ್ದು ' ಹಿಂದಿಯೂ ಕಾವಮನ ಹಾಗೆ ಅಕ್ಷರಣ ಕಾರಿಯಲ್ಲವೆಂಬುದನ್ನು ಉತ್ತರದವರು ದಕ್ಷಿಣದವರಿಗೆ ' ಖಂಡಿತಪಡಿಸಬೇಕು ' ಎಂದು ಹೇಳಿದರು; ಇಲ್ಲಿ ತಮಾಷೆಯು ಏನಿದೆಯೆಂದರೆ, ಹಿಂದೆ ಸೀತಾಕಾಲವು ಚಿತ್ರಗಳನ್ನು ಸುಟ್ಟವರು ಇಂದು ಹಿಂದಿಗೆ ಸ್ವಾಗತವನ್ನೇಯುತ್ತಿದ್ದಾರಲ್ಲದೆ, ಎದ್ದು ರಿಸುವವನ್ನು ಶಿಕ್ಷಿಸಬೇಕೆಂದು ಹೇಳುತ್ತಿಲ್ಲವಾದರೆ! ಅದರೆ ಸೀತಾ-ರಾವಣ ಹೆಸರನ್ನು ಹೇಳುತ್ತಿರುವ ದೊಡ್ಡ ಜನರೇ ಹಿಂದಿಯನ್ನು ಎದುರಿಸುತ್ತಿದ್ದಾರೆ! ಅವರು ರಾಮಾಯಣ - ಮಹಾಭಾರತಗಳನ್ನು ಬರೆದಿರುವಂತಾದರೂ ಏನು ಫಲ!

ಶ್ರೀ ಪ್ರಕಾಶರ ಮನಸ್ಸಿನಲ್ಲಿ ' ಅರ್ಯ-ದ್ರಾವಿಡ ' ಬಂಡೆ ಬಾರಿಸುತ್ತಿದ್ದವರೇ ಇಂದಿನ ಭಾಷಾ ಗಲಾಟೆಗೆ ಕಾರಣರೆಂದು ತಿಳಿಸಬೇಕಾಗಿತ್ತೇನು? ಹಾಗಿದ್ದಲ್ಲಿ ಅವರನ್ನು ಸ್ಪಷ್ಟವಾಗಿ ಹೇಳಬಹುದಿತ್ತು; ಅರ್ಯ-ದ್ರಾವಿಡ ಬಂಬಡ ಬಾರಿಸುತ್ತಿರುವವರು ನಿಜವಾಗಿ ಹಿಂದಿಗೆ ಅಂದರೆ ' ಉತ್ತರ ' ದ ಭಾಷೆಗಳಿಗೆ ವಿರೋಧಿಗಳಂತಿದ್ದು ' ಹಿಂದಿ ಸಾಕಷ್ಟಾಗಲಿ ' ಎನ್ನುತ್ತಿದ್ದಾರೆ; ಅದನ್ನೇ ಪಾಠ ಕಲಿಸುವುದು ಅವರ ಉದ್ದೇಶವಾಗಿತ್ತಲ್ಲಿ ಪುರಾಣ ಹಾಗೂ ಇವರು ಮತೀಯ ಗ್ರಂಥಗಳಲ್ಲಿ ವಿಂಧ್ಯಪರ್ವತದಾಚೆಗೆ ಮತ್ತು ಈಚೆಗೆ ಇರುವವರ ನಡುವೆ ವ್ಯತ್ಯಾಸವಿರುವುದು ಗೊತ್ತಾಗುತ್ತದೆಂದು ಅವರು ಹೇಳಬೇಕಾಗಿರಲಿಲ್ಲ: ಏಕೆಂದರೆ ವಿಜಯನಾಗಿ ಹೋಗೀನಿಲ್ಲ; ರಾವಣಾಯಣ-ಮಹಾಭಾರತ ಕಾಲದಲ್ಲಾಗಲೀ, ಆರ್ಯ ವರ್ಣಗಾರರನ್ನು ಎದುರಿಸುತ್ತಿದ್ದ ಕಾಲದಲ್ಲಾಗಲೀ, ಸ್ವಾತಂತ್ರ್ಯ ಸಮರದ ಸಮಯದಲ್ಲಾಗಲೀ ಆ ವ್ಯತ್ಯಾಸ ಕಂಡುಬರಲೇ ಇಲ್ಲ: ಪ್ರಮುಖ ಮಹಾಪುರುಷರೆಲ್ಲರೂ ' ಕಿಳ್ಳಣ ' ದವರೇ ಇದ್ದ ಅಪಿಲ ಭಾರತದಲ್ಲಿ ಅವರು ತಮ್ಮ ಧ್ವಜವನ್ನು ನೆಟ್ಟಿರುವರು; ಆದ್ದರಿಂದ ಶಂಕರಾಚಾರ್ಯರು ಹೊರಗಿನವರೆಂದು ಅ ಧ್ಯಾತ್ಮ ಭಾರತೀಯರೂ ತಿರಸ್ಕರಿಸಿಲ್ಲವಲ್ಲ. ಹಾಗೆಯೇ ಶಿವಾಜಿ ಗುರು ಗೋವಿಂದ ಸಿಂಹ, ಲಕ್ಷ್ಮೀಬಾಯಿ ಅಥವಾ ವಿವೇಕಾನಂದ ತಮ್ಮವರಲ್ಲವೆಂದು ಅದ್ಯಾವನೂ ಹೇಳಲಾರ: ಕವಿವರ್ಯ ಭಾರತೀಯರು ಅವನ್ನು ಚೆನ್ನಾಗಿ ಹಾಡಿರುವರು.

ವಾಸ್ತವ್ಯ ಸ್ಥಿತಿ ಹಾಗಿರುವಾಗ ಕರ್ತವ್ಯಜ್ಞಾನಿಯಂತೆ ಮಗ ಹಾಗೂ ಜವಾಬ್ದಾರಿ ಸ್ಥಳದಲ್ಲಿದ್ದ ಘನವ್ಯಕ್ತಿ ಇಂತಹ ಸಂದಿಗ್ಧ ಸಮಯದಲ್ಲಿ ಇಂಥ ಮಾತುಗಳನ್ನಾಡಬಹುದೇ?

— ಶಿವಶಂಕರ್

ಗೋರಕ್ಷಣ ವ್ಯವಸ್ಥಾಪಕರ ವಿನಂತಿ

.....

ಹಣವಾ ವಾಯಿದೆ ಮುಗಿದಿರುವವರು ದಯವಾಡಿ ಹಾವತಿಮಾಡಬೇಕಾಗಿ ವಿನಂತಿ

ಡಾ|| ಪಿ ಎಸ್ ನಾರಾಯಣ್, ಶ್ರೀ ಪಿ ಎಸ್ ವಿಶ್ವನಾಥ್, ಜಯನಗರ, ಹೆಂಗಳೂರು
ಶ್ರೀ ಜಿ ಶಾಮ್ಯಗಳು (ಪದ ರೈಲ್ವೆ) ವಿದ್ಯಾರಣ್ಯಪುರಂ, ಮೈಸೂರು
ಶ್ರೀ ಅನಂತನಂಬಿಯಪ್ಪಂಗಾರ್, ಶಾಸ್ತ್ರಧರ್ಮ ಪ್ರಚಾರಸಭಾ, ಹೊಂಗನೂರು
ಗೋರಕ್ಷಣ ಅಭಿಮಾನಿ, ಸತ್ಯವಾದಿ ಪ್ರೆಸ್, ಚಾಮರಾಜಪುರಂ, ಮೈಸೂರು 4



ಗೋರಕ್ಷಣೆ ಪ್ರಾಣದಯೂ ಕಾರ್ಯಗಳು ಹೆಚ್ಚಿಬ್ಬಾಗಿ ನಡೆಯಲಿ

ವುಡ್‌ಲಾಂಡ್ಸ್ ಜನಭರಿತ 2ನೇ ವಾರ

— ಅತ್ಯವೋತ್ತಮ ಹಿಂತ ಚಿತ್ರ —

ಫೂಲೋಂ ಕೆ ಸೇಜ್

ನಟವರ್ಗ— ವೈಜಯಂತಿಮಾಲಾ, ಅಶೋಕ್‌ಕುಮಾರ್, ನಿರೂಪರಾಯ್, ಮುನೋಜ್‌ಕುಮಾರ್, ಮಹಮೂದ್

[ದಿನವಹಿ 3 ಪ್ರದರ್ಶನಗಳು]

ಆಪೆರಾ— 5-3-65 ರಿಂದ

ನಾಗ ಪೂಜಾ (ಕನ್ನಡ)

ತಾರಾಗಣ— ರಾಜಕುಮಾರ್, ಲೀಲಾವತಿ, ತಾಜಿತ್, ರಾಜಶೇಖರ್

ಅಮೋಘ ಪೌರಾಣಿಕ ಕನ್ನಡ ಚಿತ್ರ — ದಿನ 3 ಆಟಗಳು

SHAKTI

SUDHA

Superb Tonic

ಆಶೋಕಾ ಪಿಕ್ಚರ್ಸ್

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಸಮಸ್ತ ವಿಧವಾದ ಅಚ್ಚುಮೇದ ಕೆಲಸಗಳನ್ನು ಪೂರೈಸುತ್ತವೆ.

ಎಲ್ಲಾ ಪುಸ್ತಕದಿಗಳಲ್ಲಿ ಮಾರಲ್ಪಡುತ್ತವೆ

Lakshminarasimha Press

Quality Printing — Neat Binding

Sivarampet, Mysore

Edited, Printed & Published by the Proprietor Dharma Prachara Nirata M. S. Kuppa Rao at the Satyavadi Press, Chamarajapuram, Mysore 4

Help The 'Gorakshana'